

# ಜಾಹ್ನವಿಯ ಗಟ್ಟಿ ಹೆಜ್ಜೆ

ಜಾಹ್ನವಿ ಕಪೂರ್ ಬಾಲಿವುಡ್‌ನಲ್ಲಿ ನಿಧಾನಕ್ಕಾದರೂ ಗಟ್ಟಿ ಹೆಜ್ಜೆ ಇಡುತ್ತಿದ್ದಾಳೆ. ಮೊದಲ ಸಿನಿಮಾ ಧಡಕ್ ಬಾಕ್ಸಾಫೀಸ್‌ನಲ್ಲಿ ದೊಡ್ಡ ಹಿಟ್ ಅಲ್ಲದಿದ್ದರೂ ನಿಮರ್‌ಾಪಕರ ಹಣಕ್ಕೆ ಮೋಸವಾಗಲಿಲ್ಲ. ಅದಕ್ಕಿಂತ ಮುಖ್ಯವಾಗಿ ಜಾಹ್ನವಿಗೆ "ಒಳ್ಳೆಯ ನಟಿ, ಮುಂದೆ ಬಾಲಿವುಡ್‌ಗೆ ದೊಡ್ಡ ಆಸ್ತಿ ಆಗುವ ಸಾಮರ್ಥ್ಯ ಇದೆ' ಎಂಬ ಭರವಸೆಯನ್ನು ಈ ಚಿತ್ರ ಮೂಡಿಸಿದೆ. ಎಷ್ಟಾದರೂ ಒಂದು ಕಾಲದ ಬಾಲಿವುಡ್ ಮಹಾರಾಣಿ ಶ್ರೀದೇವಿಯ ಮಗಳಲ್ಲವೆ.. ಎನ್ನುವುದು ಅಭಿಮಾನಿಗಳ ಮೆಚ್ಚುಗೆಯ ಮಾತು. ಈ ಚಿತ್ರ ಮರಾಠಿಯಲ್ಲಿ ಸೂಪರ್‌ಹಿಟ್ ಆದ ಸೈರಾಟ್ ಎಂಬ ಸಿನಿಮಾದ ರಿಮೇಕ್ ಆಗಿದ್ದುದೂ ಚಿತ್ರದ ಯಶಸ್ಸಿಗೆ ಒಂದು ಕಾರಣ ಎನ್ನಬಹುದು. ಜಾಹ್ನವಿಯ ಎರಡನೇ ಚಿತ್ರವೂ ಈಗ ಸುದ್ದಿ ಮಾಡುತ್ತಿದೆ. ಕರಣ್ ಜೋಹರ್ ನಿರ್ದೇಶನದ ತಖ್ತ್‌ನಲ್ಲಿ. ಚಿತ್ರದಲ್ಲಿ ಕರೀನಾ ಕಪೂರ್ ಮತ್ತು ಅಲಿಯಾ ಭಟ್ ನಟಿಸುತ್ತಿರುವುದು ವಿಶೇಷ.

ಒಂದು ಕಾಲದ ಟಿವಿ ಸೂಪರ್‌ಸ್ಟಾರ್ ಸ್ಮೃತಿ ಇರಾನಿ ಕೇಂದ್ರ ಸಚಿವೆಯಾಗಿ ಸಾಕಷ್ಟು ಸುದ್ದಿಯಲ್ಲಿದ್ದಾರೆ. ಸ್ಮೃತಿ ಜೊತೆಗೆ ಮಾತನಾಡುವಾಗೆಲ್ಲ ಜಾಹ್ನವಿ, ಆಂಟಿ ಆಂಟಿ ಎಂದು ಬಾಯ್ತುಂಬ ಕರೆಯುತ್ತಿದ್ದುದು ಟ್ವಿಟ್ಟರ್‌ನಲ್ಲಿ ಸ್ವತಃ ಇರಾನಿ ಕಡೆಯಿಂದ ತಮಾಷೆಗೆ ಗುರಿಯಾಗಿತ್ತು. ವಯಸ್ಸಿನಲ್ಲಿ ದೊಡ್ಡವರನ್ನು ಆಂಟಿ ಎಂದು ಕರೆಯುವುದರಲ್ಲಿ ತಪ್ಪೇನಿಲ್ಲ. ಆದರೆ ಸಿನಿಮಾ ರಂಗದಲ್ಲಿ ಇರುವವರು ತಮಗೆ ವಯಸ್ಸಾಗಿದೆ ಎನ್ನುವುದನ್ನು ಒಪ್ಪುವುದಿಲ್ಲ. ಹಾಗಾಗಿ ಸ್ಮೃತಿಯವರ ತಮಾಷೆಯ ಟ್ವೀಟ್ ನೋಡಿದ ಬಳಿಕ ಜಾಹ್ನವಿ ಸ್ಮೃತಿ ಬಳಿ ಕ್ಷಮೆ ಕೋರಿದ್ದಾಳಂತೆ.

ಅದೇನೇ ಇರಲಿ, ಬಾಲಿವುಡ್‌ನ ಯಶಸ್ವಿ ನಿರ್ದೇಶಕ ಕರಣ್ ಜೋಹರ್ ಚಿತ್ರದಲ್ಲಿ ನಟಿಸುವ ಅವಕಾಶ ಜಾಹ್ನವಿಯನ್ನು ಬಾಲಿವುಡ್‌ನ ಮುಂಚೂಣಿಯ ತಾರೆಯಾಗಿಸುವುದು ಖಂಡಿತ ಎನ್ನುತ್ತಿದೆ ಬಾಲಿವುಡ್. ಅದರಲ್ಲೂ ನಟನೆಯಲ್ಲಿ ತನ್ನದೇ ಆದ ಛಾಪು ಮೂಡಿಸಿರುವ ಅಲಿಯಾ ಭಟ್‌ಗೆ ಸ್ಪರ್ಧೆ ನೀಡುವ ಸವಾಲು ಕೂಡಾ ಜಾಹ್ನವಿಯ ಮುಂದಿದೆ. ಅದನ್ನು ಆಕೆ ಹೇಗೆ ಎದುರಿಸುತ್ತಾಳೋ ನೋಡಬೇಕು. ಈ ಸಿನಿಮಾ ಇನ್ನೊಂದು "ಕುಚ್ ಕುಚ್ ಹೋತಾ ಹೈ' ಆಗುವ ಸಾಧ್ಯತೆ ಇದೆ ಎನ್ನುತ್ತಿದ್ದಾರೆ ಆಕೆಯ ಅಭಿಮಾನಿಗಳು.



# ರಣವೀರ್ ಮುನ್ನಡೆ

'ಸಿಂಬ' ಬಿಡುಗಡೆಯಾಗುವ ಮುನ್ನ ಜನರು ಸಾರಾ ಅಲಿ ಖಾನ್ ಬಗ್ಗೆ ಹೆಚ್ಚು ಮಾತನಾಡುತ್ತಿದ್ದರು. ಆದರೆ ಚಿತ್ರ ಬಿಡುಗಡೆಯ ಬಳಿಕ ಎಲ್ಲರೂ ಚಿತ್ರದ ಹೀರೊ ರಣವೀರ್ ಸಿಂಗ್ ಬಗ್ಗೆ ಮಾತನಾಡುತ್ತಿದ್ದಾರೆ. ಹಿಂದೆ ಪದ್ಮಾವತ್‌ನಲ್ಲಿ ಹೀರೊ ಅಲ್ಲದಿದ್ದರೂ ಖಿಲ್ಜಿಯ ಪಾತ್ರದಲ್ಲಿ ವಿಜೃಂಭಿಸಿದಂತೆ ರಣವೀರ್, ಸಿಂಬದಲ್ಲೂ ವಿಜೃಂಭಿಸಿದ್ದಾನೆ.

ರಣವೀರ್ ಮುಂದಿನ ಚಿತ್ರದಲ್ಲಿ ರಣಬೀರ್ ಕಪೂರ್ ಜೊತೆಗೆ ನಟಿಸಬಹುದೆ ಎನ್ನುವುದು ಈಗ ಬಾಲಿವುಡ್ ಮುಂದಿರುವ ಬಹುದೊಡ್ಡ ಪ್ರಶ್ನೆ. ಒಂದು ಕಾಲದ ಸೂಪರ್‌ಹಿಟ್ ಚಿತ್ರ ಅಂದಾಜ್ ಅಪ್ನಾ ಅಪ್ನಾದ ಎರಡನೇ ಭಾಗವನ್ನು ತೆರೆಗೆ ತರಲು ನಿರ್ದೇಶಕ ರೋಹಿತ್ ಶೆಟ್ಟಿ ಸ್ಕೆಚ್ ಹಾಕಿದ್ದಾರೆ. "ಈ ಚಿತ್ರದಲ್ಲಿ ರಣವೀರ್ ಮತ್ತು ರಣಬೀರ್ ಸಿಂಗ್ ಜೊತೆಯಾಗಿ ನಟಿಸಬೇಕೆಂಬುದು ನನ್ನ ಆಸೆ" ಎಂದು ರೋಹಿತ್ ಈಗಾಗಲೇ ಹೇಳಿದ್ದಾರೆ. ನಟನೆಗೆ ಈ ಜೋಡಿ ಒಪ್ಪುವುದಾದರೆ ಬಾಲಿವುಡ್‌ನಲ್ಲಿ ಅದು ಹೊಸ ದಾಖಲೆಯೊಂದನ್ನು ಬರೆಯಬಹುದು ಎನ್ನುವ ನಿರೀಕ್ಷೆ ಎಲ್ಲರದ್ದು. ರೋಹಿತ್ ಶೆಟ್ಟಿಗೆ ಯಾವುದೇ ಚಿತ್ರವನ್ನು ಕಮರ್ಷಿಯಲ್ ಆಗಿ ಹಿಟ್ ಆಗಿಸುವುದು ಹೇಗೆ ಎನ್ನುವುದು ಚೆನ್ನಾಗಿ ಗೊತ್ತಿದೆ. ಅಂತಹ ಚಿತ್ರದಲ್ಲಿ ಇಬ್ಬರು ಪ್ರತಿಭಾವಂತರು ಪೈಪೋಟಿಯಿಂದ ನಟಿಸಿದರೆ, ಆ ಚಿತ್ರ ಹಿಟ್ ಆಗದೆ ಇರಲು ಸಾಧ್ಯವೆ.. ಎನ್ನುವುದು ಬಾಲಿವುಡ್ ಪಂಡಿತರ ಪ್ರಶ್ನೆ.

ಪ್ರಶ್ನೆ ಏನೇ ಇರಲಿ,ರಣವೀರ್‌ನಂತಹ ದೈತ್ಯ ನಟನ ಜೊತೆಗೆ ಒಟ್ಟಿಗೆ ನಟಿಸಿ ಗೆಲ್ಲುವುದು ರಣಬೀರ್‌ಗೆ ನಿಜವಾದ ಸವಾಲು ಎನ್ನುವುದೂ ನಿಜವೇ.

■ ಬಿಂದು